## ಕರ್ನಾಟಕ ಸರ್ಕಾರ

ಸಂಖ್ಯೆ: RDPR/630/GPS/2020 (ಭಾಗ-1) (E)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:08-09-2022.

**ಇವರಿಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು,
2) ಉಪ ಕಾರ್ಯದರ್ಶಿಗಳು (ಅಭಿವೃದ್ಧಿ)
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು,

**ಮಾನ್ಯರೆ,**

**ವಿಷಯ:** ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವೃಂದಕ್ಕೆ ಸೇವೆಯೊಳಗಿನ ನೇರ ನೇಮಕಾತಿ ಮಾಡುವ ಬಗ್ಗೆ.

**ಉಲ್ಲೇಖ:**

1. ಸರ್ಕಾರದ ಅಧಿಸೂಚನೆ ಸಂಖ್ಯೆ:RDP 630 GPS 2020 (P-1) ದಿನಾಂಕ: 31.03.2022.
2. ಸರ್ಕಾರದ ಇದೇ ಸಮಸಂಖ್ಯೆಯ ಪತ್ರ ದಿನಾಂಕ:02-06-2022.
3. ಸರ್ಕಾರದ ಪತ್ರ ಸಂಖ್ಯೆ: RDPR 251 GPA 2022, ದಿನಾಂಕ:17-08-2022.
4. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 08 ಸೆಹಿಮ 95 ದಿನಾಂಕ: 20.06.1995.
5. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 97 ಸೇನೆನಿ 2002, ದಿನಾಂಕ: 22.11.2002.
6. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 53 ಸೇನೆನಿ 2002 ದಿನಾಂಕ: 04.01.2008.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (2) ರ ಸರ್ಕಾರದ ಪತ್ರದಲ್ಲಿ ನೇರ ನೇಮಕಾತಿಗಾಗಿ 100 ರೋಷ್ಟರ್ ಬಿಂದುಗಳು ಮತ್ತು 20 ಬಿಂದುಗಳ ಸಮತಲ ಮೀಸಲಾತಿಯನ್ನು ಹೊಸದಾಗಿ ಪ್ರಾರಂಭಿಸಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವೃಂದದ ಸೇವೆಯೊಳಗಿನ ನೇರ ನೇಮಕಾತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡಲು ಕ್ರಮ ವಹಿಸುವಂತೆ ತಮಗೆ ತಿಳಿಸಲಾಗಿತ್ತು.

ಉಲ್ಲೇಖಿತ (3) ರ ಸರ್ಕಾರದ ಪತ್ರದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳಿಗೆ ನೇಮಕಾತಿ ಮಾಡುವ ಬಗ್ಗೆ ಏಕರೂಪವಾಗಿ ಮಾರ್ಗಸೂಚಿಗಳನ್ನು ಹೊರಡಿಸಲು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುವುದರಿಂದ ಈಗಾಗಲೇ ನೇಮಕಾತಿ ಮಾಡಿರುವ ಜಿಲ್ಲೆಗಳನ್ನು ಹೊರತುಪಡಿಸಿ ಇನ್ನುಳಿದ ಜಿಲ್ಲೆಗಳಲ್ಲಿ ಸೇವೆಯೊಳಗೆ ನೇರ ನೇಮಕಾತಿಯನ್ನು ತಾತ್ಕಾಲಿಕವಾಗಿ ತಡೆಹಿಡಿಯುವಂತೆ ತಮಗೆ ತಿಳಿಸಲಾಗಿತ್ತು. ಉಲ್ಲೇಖಿತ (2) ಮತ್ತು(3) ಸರ್ಕಾರದ ಪತ್ರಗಳನ್ನು ಹಿಂಪಡೆಯಲಾಗಿದೆ.

ಉಲ್ಲೇಖಿತ (1) ರ ಅಧಿಸೂಚನೆಯಲ್ಲಿ ಕರ್ನಾಟಕ ಸಾಮಾನ್ಯ ಸೇವೆಗಳು (ಅಭಿವೃದ್ಧಿ ಶಾಖೆ ಮತ್ತು ಸ್ಥಳೀಯ ಆಡಳಿತ ಶಾಖೆ (ವೃಂದ ಮತ್ತು ನೇಮಕಾತಿ) (ತಿದ್ದುಪಡಿ) ನಿಯಮಗಳು, 2021 ಅನ್ನು ದಿನಾಂಕ:31-03-2022 ರಂದು ಪ್ರಕಟಿಸಿ ದಿನಾಂಕ:01-04-2022 ರಂದು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ. ಸದರಿ ನಿಯಮಗಳಂತೆ ಗ್ರಾಮ ಪಂಚಾಯತಿ ಕಾರ್ಯದರ್ಶಿ ಮತ್ತು ಗ್ರಾಮೀಣಾಭಿವೃದ್ಧಿ ಸಹಾಯಕ (ಗ್ರೇಡ್-2) ವೃಂದದ ಶೇಕಡಾ 75 ರಷ್ಟು ಹುದ್ದೆಗಳನ್ನು ನೇಮಕಾತಿ ಪ್ರಾಧಿಕಾರದಿಂದ ಆಯ್ಕೆಗೊಂಡು ನಿರಂತರವಾಗಿ 6 ವರ್ಷಗಳ ಸೇವೆ ಸಲ್ಲಿಸಿರುವ ಬಿಲ್‌ಕಲೆಕ್ಟರ್ ಮತ್ತು ಲೆಕ್ಕಿಗರು / ಗುಮಾಸ್ತರು / ಬೆರಳಚ್ಚುಗಾರರ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳ ವೃಂದದಿಂದ ಜೇಷ್ಠತೆ ಆಧಾರದ ಮೇಲೆ 3:2 ರ ಅನುಪಾತದಲ್ಲಿ ಸೇವೆಯೊಳಗಿನ ನೇರ ನೇಮಕಾತಿ ಮಾಡಲು ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವೃಂದದ ಶೇಕಡಾ 50 ರಷ್ಟು ಹುದ್ದೆಗಳನ್ನು ನೇಮಕಾತಿ ಪ್ರಾಧಿಕಾರದಿಂದ ಆಯ್ಕೆಗೊಂಡು ನಿರಂತರವಾಗಿ 6 ವರ್ಷಗಳ ಸೇವೆ ಸಲ್ಲಿಸಿರುವ ಬಿಲ್‌ಕಲೆಕ್ಟರ್ ಮತ್ತು ಲೆಕ್ಕಿಗರು / ಗುಮಾಸ್ತರು / ಬೆರಳಚ್ಚುಗಾರರ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳ ವೃಂದದಿಂದ ಜೇಷ್ಠತೆ ಆಧಾರದ ಮೇಲೆ 1:1 ರ ಅನುಪಾತದಲ್ಲಿ ಸೇವೆಯೊಳಗಿನ ನೇರ ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಉಲ್ಲೇಖ (4) ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 08 ಸೆಹಿಮ 95 ದಿನಾಂಕ: 20.06.1995 ರ ಕಂಡಿಕೆ ೧ ರಲ್ಲಿ ಭಾರತ ಸಂವಿಧಾನ ಅನುಚ್ಛೇದ 16(4) ರನ್ವಯ ರಾಜ್ಯ ಸಿವಿಲ್ ಸೇವೆಗಳ ನೇರ ನೇಮಕಾತಿಯಲ್ಲಿ ಮೀಸಲಾತಿ ಕಲ್ಪಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದ್ದು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಸಮೂಹದವರಿಗೆ ಮೀಸಲಿರಿಸಬೇಕಾದ 100 ರಿಕ್ತ ಸ್ಥಾನಗಳ ರೋಸ್ಟರ್ ಆಧಾರದ ಮೇಲೆ ಮಾಡಬೇಕಾಗಿರುತ್ತದೆ. ಪ್ರತಿಯೊಂದು ನೇಮಕಾತಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ವೃಂದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಈ ರೋಸ್ಟರಿನ ಒಂದನೇ ಬಿಂದುವಿನಿಂದ ಪ್ರಾರಂಭವಾಗುವಂತೆ ರೋಸ್ಟರನ್ನು ಅಳವಡಿಸಿಕೊಳ್ಳಬೇಕು. ನೇರ ನೇಮಕಾತಿ ರಿಕ್ತ ಸ್ಥಾನಗಳನ್ನು ರೋಸ್ಟರಿನ ಒಂದನೇ ಬಿಂದುವಿನಿಂದ ಪ್ರಾರಂಭಿಸಿ 100ನೇ ಬಿಂದುವಿನವರೆಗೂ ಸಂಬಂಧಿಸಿದ ಆಯಾ ಗುಂಪಿನ ಅಭ್ಯರ್ಥಿಗಳಿಂದ ಆಯ್ಕೆ ಮಾಡಿ ಭರ್ತಿ ಮಾಡತಕ್ಕದು. ಉದಾಹರಣೆಗೆ ಈ ಆದೇಶದ ನಂತರ ಮೊದಲನೇ ನೇಮಕಾತಿಯಲ್ಲಿ 21 ನೇ ರಿಕ್ತ ಸ್ಥಾನದವರಗೆ ಭರ್ತಿ ಮಾಡಲ್ಪಟ್ಟಲ್ಲಿ ಮುಂದಿನ ನೇಮಕಾತಿಯಲ್ಲಿ ರೋಸ್ಟರ್‌ನ್ನು 22ನೇ ಬಿಂದುವಿನಿಂದ ಚಾಲನೆಗೊಳಿಸತಕ್ಕದ್ದು. ನಂತರದ ನೇಮಕಾತಿಗಳಲ್ಲಿಯೂ ಇದೇ ಪದ್ಧತಿಯನ್ನು 100ನೇ ರಿಕ್ತ ಸ್ಥಾನ ಭರ್ತಿ ಆಗುವವರೆಗೂ ಅನುಸರಿಸತಕ್ಕದ್ದು. ೧೦೦ ರಿಕ್ತ ಸ್ಥಾನಗಳನ್ನು ಭರ್ತಿ ಮಾಡಿದ ನಂತರ ರೋಸ್ಟರಿನ ಮೊದಲನೆ ಬಿಂದುವಿನಿಂದ ಪುನರಾಂಭಿಸತಕ್ಕದ್ದು ಎಂದಿರುತ್ತದೆ.

ಉಲ್ಲೇಖ (5) ಮತ್ತು (6) ರ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ ೫೩ ಸೇನೆನಿ ೨೦೦೭ ದಿನಾಂಕ: ೪.೧.೨೦೦೮ ರಲ್ಲಿ ಸರ್ಕಾರಿ ಸೇವೆಗಳಿಗೆ ನೇರ ನೇಮಕಾತಿಯಲ್ಲಿ ವಿವಿಧ ಸಮತಳ ಮೀಸಲಾತಿಗಳನ್ನು ಕಾರ್ಯಗತಗೊಳಿಸುವ ಬಗ್ಗೆ ೨೦ ಬಿಂದುಗಳ ರೋಸ್ಟರನ್ನು ನಿಗದಿಪಡಿಸಲಾಗಿರುತ್ತದೆ.

1) ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-2 ವೃಂದದ ಸೇವೆಯೊಳಗೆ ನೇರ ನೇಮಕಾತಿ ಕೋಟಾದಲ್ಲಿ 18 ಹುದ್ದೆಗಳು ಖಾಲಿ ಇದ್ದಲ್ಲಿ ರೋಸ್ಟರ್ ಬಿಂದುಗಳನ್ನು ಈ ರೀತಿ ನಿಗಧಿಪಡಿಸಬೇಕು. ಉದಾ: ಈ ಹಿಂದೆ ರೋಸ್ಟರ್ 10 ಕ್ಕೆ ನಿಲುಗಡೆಯಾಗಿದ್ದಲ್ಲಿ, ಮುಂದಿನ ನೇಮಕಾತಿ ಈ ರೀತಿಯಲ್ಲಿ ಮಾಡಬೇಕು, ರೋಸ್ಟರ್ 11, 12, 13 ---- ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ 3:2 ಅನುಪಾತದಲ್ಲಿ ರೋಸ್ಟರ್ ಬಿಂದು 11, 12 ಮತ್ತು 13 ಅನ್ನು ಬಿಲ್‌ಕಲೆಕ್ಟರ್ ವೃಂದದವರಿಗೆ ಹಾಗೂ ರೋಸ್ಟರ್ ಬಿಂದು 14 ಮತ್ತು 15 ಅನ್ನು ಲೆಕ್ಕಿಗರು / ಗುಮಾಸ್ತರು / ಬೆರಳಚ್ಚುಗಾರ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ವೃಂದದ ನೌಕರರಿಗೆ, ನಂತರ 16, 17 ಮತ್ತು 18 ನ್ನು ಬಿಲ್‌ಕಲೆಕ್ಟರ್ ವೃಂದದವರಿಗೆ ಹಾಗೂ 19 ಮತ್ತು 20 ಅನ್ನು ಲೆಕ್ಕಿಗರು / ಗುಮಾಸ್ತರು / ಬೆರಳಚ್ಚುಗಾರ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ವೃಂದದ ನೌಕರರಿಗೆ ಹೀಗೆ ಮುಂದುವರೆಸಿ, ನಿಗಧಿಪಡಿಸಿ ಭರ್ತಿ ಮಾಡಬೇಕಾಗಿರುತ್ತದೆ.

2) ದ್ವಿತೀಯ ದರ್ಜೆ ಲೆಕ್ಕ ಸಹಾಯಕ ವೃಂದದ ಸೇವೆಯೊಳಗೆ ನೇರ ನೇಮಕಾತಿ ಕೋಟಾದಲ್ಲಿ 20 ಹುದ್ದೆಗಳು ಖಾಲಿ ಇದ್ದಲ್ಲಿ ರೋಸ್ಟರ್ ಬಿಂದುಗಳನ್ನು ಈ ರೀತಿ ನಿಗಧಿಪಡಿಸಬೇಕು. ಉದಾ: ಈ ಹಿಂದೆ ರೋಸ್ಟರ್ 15 ಕ್ಕೆ ನಿಲುಗಡೆಯಾಗಿದ್ದಲ್ಲಿ, ಮುಂದಿನ ನೇಮಕಾತಿ ಈ ರೀತಿಯಲ್ಲಿ ಮಾಡಬೇಕು, ರೋಸ್ಟರ್ 16, 17,------ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ 1:1 ಅನುಪಾತದಲ್ಲಿ ರೋಸ್ಟರ್ ಬಿಂದು 16 ಬಿಲ್‌ಕಲೆಕ್ಟರ್ ವೃಂದದವರಿಗೆ ಹಾಗೂ ರೋಸ್ಟರ್ ಬಿಂದು 17 ಅನ್ನು ಲೆಕ್ಕಿಗರು / ಗುಮಾಸ್ತರು / ಬೆರಳಚ್ಚುಗಾರ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ವೃಂದದ ನೌಕರರಿಗೆ, ನಂತರ 18 ನ್ನು ಬಿಲ್‌ಕಲೆಕ್ಟರ್ ವೃಂದದವರಿಗೆ ಹಾಗೂ 19 ಅನ್ನು ಲೆಕ್ಕಿಗರು / ಗುಮಾಸ್ತರು / ಬೆರಳಚ್ಚುಗಾರ / ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ವೃಂದದ ನೌಕರರಿಗೆ ಹೀಗೆ ಮುಂದುವರೆಸಿ, ನಿಗಧಿಪಡಿಸಿ ಭರ್ತಿ ಮಾಡಬೇಕಾಗಿರುತ್ತದೆ.

ಆದುದರಿಂದ ಮೇಲೆ ವಿವರಿಸಿರುವಂತೆ ಈಗಾಗಲೇ ನೇಮಕಾತಿ ಮಾಡಿರುವ ಜಿಲ್ಲೆಗಳನ್ನು ಹೊರತುಪಡಿಸಿ ಉಲ್ಲೇಖ (4) (5) ಮತ್ತು (6) ರಂತೆ ನೇರ ನೇಮಕಾತಿಗಾಗಿ 100 ರೋಷ್ಟರ್ ಬಿಂದುಗಳು ಮತ್ತು 20 ಬಿಂದುಗಳ ಸಮತಲ ಮೀಸಲಾತಿಯನ್ನು ಅಳವಡಿಸಿಕೊಂಡು ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-2 ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ವೃಂದದ ಸೇವೆಯೊಳಗಿನ ನೇರ ನೇಮಕಾತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡಲು ಕ್ರಮ ವಹಿಸುವಂತೆ ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

B. Naveenkumar 08/09/22
(ನವೀನ್ ಕುಮಾರ್. ಬಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, (ಗ್ರಾ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿ:- ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ.**

ಆಯುಕ್ತರು, ಪಂಚಾಯತ್ ರಾಜ್, ಕಾಳಿದಾಸ ರಸ್ತೆ, ಗಾಂಧಿನಗರ, ಬೆಂಗಳೂರು.